**ಸಾಕ್ಷಿಗೆ ದಿನಾಂಕಃ05-02-2026 ರಂದು ಪುನಃ ಕರೆಯಿಸಿ ಮಧ್ಯಾಹ್ನ 03.00 ಗಂಟೆಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಂದುವರೆದ ಪಾಟೀ ಸವಾಲು :: ವಾದಿ ಪರ ಶ್ರೀ TLP ವಕೀಲರಿಂದ ::**

ನಿಪಿ14 ರ ಪ್ರಕಾರ ವಾದಿಗೆ ಹಾಗೂ 1 ನೇ ಪ್ರತಿವಾದಿಯ ಗಂಡನಿಗೆ ಬಂದ ಹಿಸ್ಸೆಯ ಪ್ರಕಾರ ಅವರು ಮತ್ತು ಅವರ ಕುಟುಂಬಸ್ಥರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. ವಾದಿಯ ಆಸ್ತಿಯ ಮೇಲೆ ಪ್ರತಿವಾದಿಗಳಾದ ನಮಗೆ ಹಾಗೂ ನಮ್ಮ ಆಸ್ತಿಯ ಮೇಲೆ ವಾದಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂದರೆ ಸರಿ.  ನಿಪಿ27 ದಾವೆಯನ್ನು ನಾವುಗಳು ಸರ್ಕಾರದ ವಿರುದ್ದ ಸರ್ವೇ ನಂಬರ್ 7 ರಲ್ಲಿನ 2 ಎಕರೆ 34 ಗುಂಟೆ ಜಾಗಕ್ಕೆ ಸಂಬಂಧಪಟ್ಟಂತೆ  ಹೂಡಿರುತ್ತೇವೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅದನ್ನು ಹೊರತುಪಡಿಸಿ ಭೂದಾನಕ್ಕೆ ನೀಡಿರುವ 2  ಎಕರೆ ಜಮೀನು ಪೈಕಿ 1 ಎಕರೆ ಸಹ ನಮಗೆ ಬರಬೇಕೆಂದು ಹೂಡಿರುತ್ತೇವೆಂದು ನುಡಿಯುತ್ತಾರೆ. 1 ನೇ ಪ್ರತಿವಾದಿಯ ಗಂಡ ಮೃತರಾದ ನಂತರದಲ್ಲಿ ನಮ್ಮ ಹಾಗೂ ವಾದಿಯ ನಡುವೆ ಸರ್ವೇ ನಂಬರ್ 7 ರಲ್ಲಿನ ಜಾಗಕ್ಕೆ ಸಂಬಂಧಪಟ್ಟಂತೆ ಹಲವಾರು ವ್ಯಾಜ್ಯಗಳು ನಡೆಯುತ್ತಾ ಬಂದಿರುತ್ತದೆ ಎಂದರೆ ಸರಿ. ವಾದಿ ಹಾಗೂ ಅವರ ಮಕ್ಕಳ ವಿರುದ್ದ ನಾವುಗಳು ಅಜ್ಜಂಪುರ ಪೋಲೀಸ್ ಠಾಣೆಗೆ ನಿಪಿ 24 ರಂತೆ ಒಂದು ದೂರನ್ನು ನೀಡಿರುತ್ತೇವೆ ಎಂದರೆ ಸರಿ. ನಿಪಿ24 ರಲ್ಲಿ ಇರುವ ಬರವಣಿಗೆ ನನ್ನದೇ ಆಗಿರುತ್ತದೆ. ದಾವಾ ಆಸ್ತಿಯಲ್ಲಿನ ಅಡಿಕೆ ಕಟಾವು ಮಾಡಿರುವ ವಿರುದ್ದ ಸದರಿ ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ವಾದಿಯ ಜಮೀನಿನಲ್ಲಿ ಅಡಿಕೆ ಕಟಾವು ಮಾಡಲು ನಮ್ಮ ಯಾವುದೇ ಅಭ್ಯಂತರ ಇರುವುದಿಲ್ಲ ಎಂದರೆ ಸರಿ. ವಾದಿಯ 1 ಎಕರೆ 17 ಗುಂಟೆ ಜಾಗಕ್ಕೆ ಸಂಬಂಧಪಟ್ಟಂತೆ  ಈ ದಾವೆಯು ಡಿಕ್ರಿಯಾಗಲು ನಮ್ಮ ಯಾವುದೇ ಅಭ್ಯಂತರ ಇಲ್ಲ ಎಂದರೆ ಸರಿ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

sd/-
ಸಿ.ಜೆ. ಮತ್ತು ಹೆ. ಜೆ.ಎಮ್.ಎಫ್.ಸಿ.,
ತರೀಕೆರೆ.